# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಜೂನ್ 19, 2022

ಸಂಪುಟ : 49 ಸಂಚಿಕೆ : 36 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 5.00 www.janathavani.com janathavani@mac.com





# ದುರ್ವಾಸನೆಯ ನೀರು, ಸ್ಥಳಕ್ಕೆ ಅಧಿಕಾರಿಗಳ ಭೇಟಿ ಕ್ರಮ ತೆಗೆದುಕೊಳ್ಳಲು ಜಲಸಿರಿ ಸಿಬ್ಬಂದಿಗೆ ಸೂಚನೆ



**ಹರಿಹರ**

ಹರಿಹರ, ಜೂ. 18 - ನಗರದ ಹಲವು ಬಡಾವಣೆಗಳಲ್ಲಿ ಕಳೆದ ಎರಡು ಮೂರು ದಿನಗಳಿಂದ ದುರ್ವಾಸನೆ ಬೀರುವ ನೀರು ಸರಬರಾಜು ಆಗುತ್ತಿರುವ ದೂರುಗಳ ಹಿನ್ನೆಲೆಯಲ್ಲಿ ನಗರಸಭೆ ಪೌರಾಯುಕ್ತ ಐಗೂರು ಬಸವರಾಜ್ ಮತ್ತು ಜಲಸಿರಿ ಅಧಿಕಾರಿ ಪ್ರವೀಣ್ ಕೋಟ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಅಧಿಕಾರಿಗಳೊಂದಿಗೆ ಮಾತನಾಡಿದ ಬಡಾವಣೆಯ ನಿವಾಸಿಗಳಾದ ಸುರೇಶ್, ಕರಿಬಸಪ್ಪ, ಮೀನಾಕ್ಷಮ್ಮ ಬಂಡಾರಿ ಖಂಡು, ನಲ್ಲಿಯಲ್ಲಿ ಹರಿದು ಬರುತ್ತಿರುವ ನೀರು ಕಳೆದ ಮೂರು ನಾಲ್ಕು ದಿನಗಳಿಂದ ದುರ್ವಾಸನೆ ಬೀರುತ್ತಿದೆ. ನಮಗೆ ಶುದ್ಧೀಕರಿಸಿದ ಮತ್ತು ಹೊಳೆಯ ನೀರನ್ನು ಸರಬರಾಜು ಮಾಡುವಂತೆ ಮನವಿ ಮಾಡಿಕೊಂಡರು.

ಈ ವೇಳೆ ಜಲಸಿರಿ ಯೋಜನೆಯ ಅಧಿಕಾರಿ ಪ್ರವೀಣ್ ಕೋಟ ಅವರು ಮಾತನಾಡಿ, ನಗರದಲ್ಲಿ ನೀರು ಸರಬರಾಜು ಕೇಂದ್ರದಲ್ಲಿ ಶುದ್ಧೀಕರಿಸಿದ ನೀರನ್ನು ಸರಬರಾಜು ಮಾಡಿದ ದಿನವೇ ಬಳಸಬೇಕು. ಇಲ್ಲದೆ ಹೋದರೆ ಮಾರನೆಯ ದಿನ ಅದಕ್ಕೆ ಬಳಸಿದ ಕೆಮಿಕಲ್ ಪ್ರಮಾಣ ಕಡಿಮೆಯಾಗಿ ನೀರು ಕಲುಷಿತವಾದ ರೀತಿಯಲ್ಲಿ ಕಾಣುತ್ತದೆ ಎಂದರು.

ಪೌರಾಯುಕ್ತ ಐಗೂರು ಬಸವರಾಜ್ ಮಾತನಾಡಿ, 24/7 ನೀರು ಸರಬರಾಜು ಎಂದು ಹೆಸರನ್ನು ಇಟ್ಟುಕೊಂಡು ದಿನದ 24 ಗಂಟೆ ನೀರು ಸರಬರಾಜು ಮಾಡುವುದಕ್ಕೆ ಆಗುತ್ತಿಲ್ಲ ಎಂಬ ಮಾತನ್ನು ನಾನು ಸಹ ಒಪ್ಪಿಕೊಳ್ಳುತ್ತೇನೆ. ಈಗಾಗಲೇ 3 ಜೋನ್ ಕಾಮಗಾರಿ ಮುಗಿದಿದ್ದು, ಇನ್ನೂ 1 ಜೋನ್ ಕಾಮಗಾರಿ ಬಾಕಿ ಇದೆ. ಕೆಲವೊಂದು ಬಡಾವಣೆಯಲ್ಲಿ ಇನ್ನೂ ಸಂಪೂರ್ಣವಾಗಿ ಪೈಪ್ ಅಳವಡಿಕೆ ಆಗದೇ ಬಾಕಿ ಇರೋದರಿಂದ ಶೇ. 10 ರಷ್ಟು ತೊಂದರೆಗಳು ಆಗಿವೆ. ಮತ್ತು ಕೆಲವೊಂದು ತಾಂತ್ರಿಕ ದೋಷಗಳು ಇರುವುದರಿಂದ ಸಾರ್ವಜನಿಕರಿಗೆ ದಿನಕ್ಕೆ 24 ಗಂಟೆ ನೀರು ಸರಬರಾಜು ಮಾಡುವುದಕ್ಕೆ ಆಗಿರುವುದಿಲ್ಲ. ಮುಂದಿನ ದಿನಗಳಲ್ಲಿ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಸಾರ್ವಜನಿಕರಿಗೆ ದಿನಕ್ಕೆ 24 ಗಂಟೆ ನೀರು ಸರಬರಾಜು ಮಾಡುವುದಾಗಿ ಹೇಳಿದರು.

ಜಲಸಿರಿ ಸಿಬ್ಬಂದಿ ಬೆಳಿಗ್ಗೆ ಬೇಗನೆ ಬಂದು ನೀರು ಸರಬರಾಜಿನ ಬಗ್ಗೆ ಪರಿಶೀಲನೆ ನಡೆಸಬೇಕು. ಸಾರ್ವಜನಿಕರಿಗೆ ತೊಂದರೆ ಆಗದಂತೆ ಎಚ್ಚರಿಕೆ ವಹಿಸಬೇಕು ಎಂದು ಪೌರಾಯುಕ್ತ ಐಗೂರು ಬಸವರಾಜ್ ಇದೇ ಸಂದರ್ಭದಲ್ಲಿ ತಾಕೀತು ಮಾಡಿದರು.

ಈ ಸಂದರ್ಭದಲ್ಲಿ ನಗರಸಭೆ ಆರೋಗ್ಯ ಇಲಾಖೆಯ ಗುರುಪ್ರಸಾದ್, ಜಲಸಿರಿ ಸಿಬ್ಬಂದಿಗಳಾದ ದೇವರಾಜಪ್ಪ, ಇಂಜಿನಿಯರ್ ಸಮೀರ್, ಮಂಜುನಾಥ್, ಅಭಿಷೇಕ, ಭಾರತ್,ಅವಿನಾಶ್, ಪ್ರವೀಣ್, ಕಾಳಿದಾಸ ಸೈಯದ್ ಸತ್ತಾರ್ ಮತ್ತಿತರರು ಹಾಜರಿದ್ದರು.

## ಸರ್.ಎಂ. ವಿ. ಕಾಲೇಜಿಗೆ ಅತ್ಯುತ್ತಮ ಫಲಿತಾಂಶ

ದಾವಣಗೆರೆ, ಜೂ. 18- ನಗರದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸರ್.ಎಂ.ವಿ. ಕಾಲೇಜಿಗೆ ಅತ್ಯುತ್ತಮ ಫಲಿತಾಂಶ ದೊರೆತಿದೆ.

ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಜಿಯಾ ಎಂ. ಜೈನ್ 600 ಕ್ಕೆ 589 ಅಂಕಗಳನ್ನು ಪಡೆದು ಜಿಲ್ಲೆಗೆ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ಶ್ರೇಷ್ಠ ಎಂ.ಎಸ್. ಹಾಗೂ ಕಾರ್ತಿಕ ಜಿ. 600 ಕ್ಕೆ 587 ಅಂಕಗಳನ್ನು ಜಿಲ್ಲೆಗೆ ತೃತೀಯ ಸ್ಥಾನವನ್ನು ಪಡೆದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಉತ್ತಮ್ ಹಂಸರಾಜ್ ಹಾಗೂ ಸೃಷ್ಠಿ ಎಂ.ಎಸ್. 600 ಕ್ಕೆ 590 ಅಂಕ ಗಳಿಸಿ, ಕಾಲೇಜಿಗೆ ಪ್ರಥಮರಾಗಿದ್ದಾರೆ. ಕಿಶನ್ ಎಲ್ ಪಾಟೀಲ್ ಹಾಗೂ ಮಹಿಮಾ ಗೌಡ 600 ಕ್ಕೆ 589 ಅಂಕ ಗಳಿಸುವ ಮೂಲಕ ಅತ್ಯುತ್ತಮ ಫಲಿತಾಂಶ ಪಡೆದಿದ್ದಾರೆ.


ಸರ್. ಎಂ.ವಿ ಸಮೂಹ ಸಂಸ್ಥೆಯ 575 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

ಭೌತಶಾಸ್ತ್ರದಲ್ಲಿ 34 ವಿದ್ಯಾರ್ಥಿಗಳು, ರಸಾಯನಶಾಸ್ತ್ರದಲ್ಲಿ 43 ವಿದ್ಯಾರ್ಥಿಗಳು, ಗಣಿತಶಾಸ್ತ್ರದಲ್ಲಿ 149 ವಿದ್ಯಾರ್ಥಿಗಳು, ಜೀವಶಾಸ್ತ್ರದಲ್ಲಿ 34 ವಿದ್ಯಾರ್ಥಿಗಳು, ಗಣಕ ವಿಜ್ಞಾನಶಾಸ್ತ್ರದಲ್ಲಿ 30 ವಿದ್ಯಾರ್ಥಿಗಳು, ಕನ್ನಡದಲ್ಲಿ 9 ವಿದ್ಯಾರ್ಥಿಗಳು, ಸಂಸ್ಕೃತದಲ್ಲಿ 3 ವಿದ್ಯಾರ್ಥಿಗಳು, ಹಿಂದಿಯಲ್ಲಿ ಒರ್ವ ವಿದ್ಯಾರ್ಥಿ, ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ಒರ್ವ ವಿದ್ಯಾರ್ಥಿ ವಿಷಯವಾರು ನೂರಕ್ಕೆ ನೂರು ಅಂಕ ಗಳಿಸಿದ್ದಾರೆ.

ಅಮೋಘ ಫಲಿತಾಂಶವನ್ನು ಗಳಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಕಾಲೇಜಿನ ಅಧ್ಯಕ್ಷ ಡಾ. ವಿ. ರಾಜೇಂದ್ರನಾಯ್ಡು, ಕಾರ್ಯದರ್ಶಿ ಎಸ್.ಜೆ. ಶ್ರೀಧರ್ ಅವರುಗಳು ಅಭಿನಂದಿಸಿದ್ದಾರೆ.

## ಪದವಾಣಿ-24

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**

2) ಕುರುಬನ ಏಳಿಗೆ ಕಂಡು ಪಟ್ಟ ಹೊಟ್ಟೆಕಿಚ್ಚು 3
4) ಹೇಗೆ ನೋಡಿದರೂ ಇದು ಕಣ್ಣು 3
5) ಅರಣ್ಯ ಸಂಪತ್ತು 4
6) ಮಗಳನ್ನು ಧಾರೆ ಎರೆದುಕೊಡುವುದು 4
8) ಅವಸರದಿಂದ ಧರಿಸಿದ ಹಾರ 2
10) ಜವಾನನ ಬಳಿ ಬಂದ ಮಂದಿ 2
13) ದಾನವಲ್ಲ, ಮಾಡಿದ ತಪ್ಪನ್ನು ಮನ್ನಿಸುವುದು 4
14) ಈತ ಹೊರಗಿನವನು 4
15) ಜನ ಬೀಸಿದ ಬೀಸಣಿಕೆ 3
16) ಸ್ತ್ರೀ-ಪುರುಷ ಜೋಡಿಯುಳ್ಳ ನಕ್ಷತ್ರರಾಶಿ 3

**ಮೇಲಿನಿಂದ ಕೆಳಕ್ಕೆ :**

1) ಇದು ಮೈಸೂರು ವಿಶ್ವವಿದ್ಯಾಲಯ 6
2) ಉಡುಪಿ ಕೃಷ್ಣನ ಪರಮ ಭಕ್ತ 5
3) ಬಿಸಿಲಿಗೆ ಹರಡಿಕೊಂಡಿರುವ ರೆಂಬೆ 3
5) ಕಾಡಿನ ಅರಸ 4
7) ಬೆಳಿಗ್ಗೆ ಹೊತ್ತು ಕಾಣುವ ಸ್ವಪ್ನ 6
9) ದೇಹದಲ್ಲಿ ರಕ್ತ ಕಡಿಮೆಯಾಗುವುದು 4
11) ಹೊಚ್ಚ ಹೊಸತು 5
12) ಗಿಣಿಯ ನಡುವೆ ಕಂಡ ಕಾರ್ಖಾನೆ 3

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 23ರ ಉತ್ತರಗಳು :**

ಎಡದಿಂದ ಬಲಕ್ಕೆ : 2) ಕಣಕ 5) ಹೃದ್ಗೋಚರ 6) ಲಟಾಪಟಿ 7) ಯಮಭಾರ 9) ತಿರುಪತಿ 11) ಸಮಾರಂಭ 12) ಹನುಮಂತ 13) ತಡಿಕೆ

ಮೇಲಿನಿಂದ ಕೆಳಕ್ಕೆ : 1) ಅಕ್ಷ ಹೃದಯ 2) ಕಪ್ಪರ 3) ಕಪಾಲಬಾತಿ 4) ಚಿರೋಟಿ 8) ರಸಭರಿತ 10) ತಿಲತರ್ಪಣ. 11) ಸರ್ವಸ್ವ 12) ಹರಕೆ.

## ಮಳೆಗಾಗಿ ಪ್ರಾರ್ಥಿಸಿ ಕತ್ತೆಗಳ ಮೆರವಣಿಗೆ...



ಬಿತ್ತಿರುವ ಬೆಳೆಗಳು ಮಳೆ ಇಲ್ಲದೆ ಬಾಡುತ್ತಿರುವ ಹಿನ್ನೆಲೆಯಲ್ಲಿ ಹೊಳೆಸಿರಿಗೆರೆ ಗ್ರಾಮದಲ್ಲಿ ಶನಿವಾರ ರೈತರು ಮಳೆಗಾಗಿ ಪ್ರಾರ್ಥಿಸಿ ಕತ್ತೆಗಳಿಗೆ ಮದುವೆ ಮಾಡಿ ಮೆರವಣಿಗೆ ಮಾಡಿದರು.

## ಸಾಣೇಹಳ್ಳಿಯ ಸರ್ಕಾರಿ ಕಾಲೇಜಿಗೆ ಫಲಿತಾಂಶ

ಸಾಣೇಹಳ್ಳಿ, ಜೂ. 18- ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಇಲ್ಲಿನ ಸಾಹುಕಾರ್ ಎಸ್.ಡಿ. ಸಿದ್ಧರಾಮಯ್ಯ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಶೇ. 85.71 ಫಲಿತಾಂಶ ಲಭಿಸಿದೆ.

ವಿಜ್ಞಾನ ವಿಭಾಗದಲ್ಲಿ 8 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು, 7 ವಿದ್ಯಾರ್ಥಿಗಳು, ಕಲಾ ವಿಭಾಗದಲ್ಲಿ 13 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು, 11 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯ ಬಿ. ಈಶ್ವರಪ್ಪ ತಿಳಿಸಿದ್ದಾರೆ.

ಉತ್ತೀರ್ಣರಾದ ವಿದ್ಯಾರ್ಥಿಗಳನ್ನು, ಶ್ರಮಿಸಿದ ಸಿಬ್ಬಂದಿಯನ್ನು ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ಸಿದ್ಧಗಂಗಾ ಶ್ರೀ ಶಿವಕುಮಾರ ಸ್ವಾಮೀಜಿ ಜಯಂತ್ಯುತ್ಸವ, ಗುರುವಂದನೆ



ದಾವಣಗೆರೆ, ಜೂ. 18- ತ್ರಿವಿಧ ದಾಸೋಹಿ ಲಿಂ. ಡಾ. ಶಿವಕುಮಾರ ಮಹಾಸ್ವಾಮೀಜಿಯವರ 115 ನೇ ಜಯಂತ್ಯುತ್ಸವ, ಗುರುವಂದನೆ ಹಾಗೂ ಸಾಧಕರ ಸನ್ಮಾನ ಸಮಾರಂಭವು ನಾಳೆ ದಿನಾಂಕ 19 ರ ಭಾನುವಾರ ಬೆಳಿಗ್ಗೆ 10.30 ಕ್ಕೆ ನಗರದ ಗುರುಭವನದಲ್ಲಿ ನಡೆಯಲಿದೆ ಎಂದು ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ರಾಜಶೇಖರ ಗುಂಡಗಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಚನ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ, ಸ್ಫೂರ್ತಿ ಪ್ರಕಾಶನ ತೆಲಗಿ, ಯೋಗಾನಂದ ಯೋಗ ಕೇಂದ್ರ, ಬಜ್ಜಿ ಹನುಮಂತಪ್ಪ ಚಾರಿಟಬಲ್ ಟ್ರಸ್ಟ್ ದಾವಣಗೆರೆ, ಕರ್ನಾಟಕ ರಾಜ್ಯ ಸಮಾನ ಮನಸ್ಕರ ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ, ಸೇವಾ ಒಕ್ಕೂಟ ಬೆಂಗಳೂರು ಇವರ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಡಾ. ಶಿವಕುಮಾರ ಸ್ವಾಮೀಜಿ ಕುರಿತ ಕವನ, ಲೇಖನಗಳ ಸಂಗ್ರಹ 'ಭಕ್ತಿ ಕುಸುಮಾಂಜಲಿ' ಮತ್ತು ಹೆಚ್.ಕೆ. ಸತ್ಯಭಾಮ ಮಂಜುನಾಥ್ ಅವರ 'ಅಂತರ್ ಘಟ' ಕೃತಿ ಲೋಕಾರ್ಪಣೆ ಸಹ ನಡೆಯಲಿದೆ. ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಆವರಗೊಳ್ಳ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸಲಿದ್ದು, ರಟ್ಟಿಹಳ್ಳಿ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಚನ್ನಗಿರಿಯ ಡಾ. ಕೇದಾರಲಿಂಗ ಶಿವಶಾಂತ ಶಿವಾಚಾರ್ಯ ಸ್ವಾಮೀಜಿ, ಮಾಚಿದೇವ ಮಹಾಸಂಸ್ಥಾನ ಮಠದ ಶ್ರೀ ಬಸವ ಮಾಚಿದೇವ ಸ್ವಾಮೀಜಿ, ಕೇತೇಶ್ವರ ಮಹಾಮಠದ ಶ್ರೀ ಬಸವ ಮೇದಾರ ಕೇತೇಶ್ವರ ಸ್ವಾಮೀಜಿ, ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಫಾದರ್ ಡಾ ಅಂತೋನಿ ಪೀಟರ್ ಉಪಸ್ಥಿತರಿರುವರು.

ಜಿಲ್ಲಾಧಿಕಾರಿ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಡಾ. ಶಾಮನೂರು ಶಿವಶಂಕರಪ್ಪ 'ಭಕ್ತಿ ಕುಸುಮಾಂಜಲಿ' ಕೃತಿ ಬಿಡುಗಡೆ ಮಾಡುವರು. ಶಾಸಕ ಎಸ್.ಎ. ರವೀಂದ್ರನಾಥ್ 'ಅಂತರ ಘಟ' ಕೃತಿ ಲೋಕಾರ್ಪಣೆ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಚುಸಾಪ ರಾಜ್ಯ ಘಟಕದ ಸಂಸ್ಥಾಪಕ ಡಾ.ಎಂ.ಜಿ.ಆರ್. ಅರಸ್, ಮೇಯರ್ ಜಯಮ್ಮ ಗೋಪಿನಾಯ್ಕ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಶಿವಯೋಗಿ ಹಿರೇಮಠ, ಹೆಚ್.ಕೆ. ಸತ್ಯಭಾಮ ಮಂಜುನಾಥ್, ಕೊಂಡಜ್ಜಿ ಆರ್. ಉಮೇಶ, ಕೆ.ಎಸ್. ವೀರಭದ್ರಪ್ಪ ತೆಲಿಗಿ ಉಪಸ್ಥಿತರಿದ್ದರು.

## ವಿಶ್ವಚೇತನ, ವೈಷ್ಣವಿ ಚೇತನ ಕಾಲೇಜುಗಳಿಗೆ ಅತ್ಯುತ್ತಮ ಫಲಿತಾಂಶ




ದಾವಣಗೆರೆ, ಜೂ. 18 - ಪದವಿ ಪೂರ್ವ ಶಿಕ್ಷಣ ಇಲಾಖೆಯು 2021-22ನೇ ಸಾಲಿನಲ್ಲಿ ನಡೆಸಿದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ನಗರದ ಶ್ರೀ ವೈಷ್ಣವಿಚೇತನ ಹಾಗೂ ವಿಶ್ವಚೇತನ ಪದವಿ ಪೂರ್ವ ಕಾಲೇಜುಗಳಿಗೆ ಅತ್ಯತ್ತುಮ ಫಲಿತಾಂಶ ಲಭಿಸಿದೆ. ವಿಜ್ಞಾನ ವಿಭಾಗದ ಕಾವ್ಯ ಎಂ.ಜೆ - 595 ಅಂಕಗಳನ್ನು ಪಡೆದು ರಾಜ್ಯಕ್ಕೆ ತೃತೀಯ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ನಿಶಾಂತ್ ಬಿ. 591 ಅಂಕಗಳನ್ನು ಪಡೆದುಕೊಂಡಿದ್ದಾರೆ.

211 ಕ್ಕೂ ಹೆಚ್ಚು ಅಧಿಕ ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 120 ವಿದ್ಯಾರ್ಥಿಗಳು ಗಣಿತ ಶಾಸ್ತ್ರದಲ್ಲಿ 100 ಕ್ಕೆ 100 ಅಂಕಗಳನ್ನು ಪಡೆದರು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳನ್ನು ಕಾರ್ಯ ದರ್ಶಿ ಶ್ರೀಮತಿ ವಿಜಯಲಕ್ಷ್ಮಿ, ಆಡಳಿತ, ಮಂಡಳಿ ಪ್ರಾಂಶುಪಾಲರು ಮತ್ತು ಉಪನ್ಯಾಸಕರು ಅಭಿನಂದಿಸಿದ್ದಾರೆ.

## ಪಾಲಿಕೆಯಿಂದ ಕಟ್ಟೆಯಮ್ಮ ಅವರಿಗೆ ಸನ್ಮಾನ



ದಾವಣಗೆರೆ, ಜೂ.18- ಮಹಾನಗರ ಪಾಲಿಕೆಯ ನಿವೃತ್ತ ಪೌರ ಕಾರ್ಮಿಕರಾದ ಶ್ರೀಮತಿ ಕಟ್ಟೆಯಮ್ಮ ಅವರನ್ನು ಮಹಾಪೌರರಾದ ಶ್ರೀಮತಿ ಆರ್.ಜಯಮ್ಮ ಗೋಪಿನಾಯ್ಕ ಅವರು ಆವರಗೆರೆಯ ದೊಡ್ಡಮ್ಮ ದೇವಸ್ಥಾನದಲ್ಲಿ ಇಂದು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಗೋಪಿನಾಯ್ಕ, ಆರೋಗ್ಯ ನಿರೀಕ್ಷಕ ರಾಘವೇಂದ್ರ, ದಫೇದಾರ್ ಹಾಲೇಶಪ್ಪ ಮತ್ತು ಲೋಹಿತ್ ಮತ್ತಿತರರು ಉಪಸ್ಥಿತರಿದರು.

## ಎಸ್ಸೆಸ್ ಹುಟ್ಟುಹಬ್ಬ : ಕಿಟ್ ವಿತರಣೆ



ದಾವಣಗೆರೆ, ಜೂ.18- ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅವರ 92ನೇ ಹುಟ್ಟುಹಬ್ಬದ ಅಂಗವಾಗಿ ನಗರದಲ್ಲಿ ಬ್ಯೂಟಿ ಪಾರ್ಲರ್ಸ್ ಅಸೋಸಿಯೇಷನ್ ಸದಸ್ಯರಿಗೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ವಿರೋಧ ಪಕ್ಷದ ನಾಯಕ ಎ.ನಾಗರಾಜ್ ಅವರು ಕಿಟ್ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಅಸೋಸಿಯೇಷನ್ ಅಧ್ಯಕ್ಷರಾದ ಕವಿತಾ ಚಂದ್ರಶೇಖರ್, ಪದ್ಮಾ ಗೀತಾ, ಆಶಾ, ಸೌಮ್ಯ, ಸುಮಾ, ಭಾರತಿ ಇನ್ನು ಮುಂತಾದವರಿದ್ದರು.

## ಚಳ್ಳಕೆರೆಯಲ್ಲಿ ಇಂದು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಸಭೆ

ಚಳ್ಳಕೆರೆ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪ್ರಥಮ ಸಾಮಾನ್ಯ ಸಭೆ ಇಂದು ಬೆಳಿಗ್ಗೆ 10.30 ಕ್ಕೆ ಪ್ರವಾಸಿ ಮಂದಿರದಲ್ಲಿ ನಡೆಯಲಿದೆ.


ದಿ|| ಶ್ರೀ ಕೆ.ಎಸ್. ಲಿಂಗಪ್ಪ (ನಿವೃತ್ತ ಎಇಇ) ರವರ ಧರ್ಮಪತ್ನಿ

## ಶ್ರೀಮತಿ ಪಿ. ಜಯಮ್ಮ ನಿಧನ



ದಾವಣಗೆರೆ ಎಂ.ಸಿ.ಸಿ. ಬಿ ಬ್ಲಾಕ್, 11ನೇ ಮೇನ್, 5ನೇ ಕ್ರಾಸ್ ವಾಸಿ

**ಶ್ರೀಮತಿ ಪಿ. ಜಯಮ್ಮ** (80 ವರ್ಷ)

ಇವರು ದಿನಾಂಕ 18.06.2022 ಶನಿವಾರ ಮಧ್ಯಾಹ್ನ 1.00 ಗಂಟೆಗೆ ಶಿವೈಕ್ಯರಾಗಿರುತ್ತಾರೆ. ಇವರ ಅಂತಿಮ ದರ್ಶನದ ವ್ಯವಸ್ಥೆಯನ್ನು ಎಂ.ಸಿ.ಸಿ ಬಿ ಬ್ಲಾಕ್‌ನ ಮೃತರ ಸ್ವಗೃಹದಲ್ಲಿ ದಿ. : 19.06.2022 ರಂದು ಮುಂಜಾನೆ 11.00 ಗಂಟೆಗೆ ಏರ್ಪಡಿಸಲಾಗಿರುತ್ತದೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 20.06.2022ನೇ ಸೋಮವಾರದಂದು ಹೊಸದುರ್ಗ ತಾಲ್ಲೂಕು, ದೊಡ್ಡಕರ್ಪೂರಕಟ್ಟೆ ಸ್ವಗ್ರಾಮದಲ್ಲಿ ಬೆಳಿಗ್ಗೆ 11.00 ಗಂಟೆಗೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :

**ಡಾ|| ಅಶೋಕ್ ಎಲ್.,** ಪ್ರಾಧ್ಯಾಪಕರು ವಿಭಾಗದ ಮುಖ್ಯಸ್ಥರು
Dept. of Oral Medicine and Radiology, Bapuji Dental College, Davangere.
**ಡಾ|| ಸುಜಾತ ಜೆ.ಪಿ.,** ಪ್ರಾಧ್ಯಾಪಕರು, ಬಾಪೂಜಿ ದಂತ ವೈದ್ಯಕೀಯ ಮಹಾ ವಿದ್ಯಾಲಯ, ದಾವಣಗೆರೆ.
**ಎಲ್. ಉಮೇಶ್,** ಇಂಜಿನಿಯರ್, ಅಬುದಾಬಿ.
**ಶ್ರೀಮತಿ ಸಂಧ್ಯಾ ಉಮೇಶ್,** ಉಪನ್ಯಾಸಕರು, ಅಬುದಾಬಿ.
**ಶ್ರೀಮತಿ ಮಂಜುಳ ಎಲ್., ಸೋಮಲಿಂಗಪ್ಪ ಎಸ್.,** ಕರ್ನಾಟಕ ಗ್ರಾಮೀಣ ಬ್ಯಾಂಕ್ ಮ್ಯಾನೇಜರ್
**ಶ್ರೀಮತಿ ವೀಣಾ ಎಲ್., ಡಾ|| ಮಲ್ಲಿಕಾರ್ಜುನ ಎಂ.,** Gynaecologist, Kerala.
ಮೊಮ್ಮಕ್ಕಳಾದ : **ಡಾ|| ಅಭಿಷೇಕ್ ಎ., ಕು|| ತ್ರಿವೇಣಿ, ಶಶಾಂಕ್, ನೇಸರ್ ಮತ್ತು ಅವಿಕ**
ಫೋನ್ : 94485 34056


## ಕಾವ್ಯಧಾರೆಯಲ್ಲಿ ಇಂದು ಗುರೂಜಿ

V1 ಕಾವ್ಯಧಾರೆಯಲ್ಲಿ ಇಂದು ಬೆಳಿಗ್ಗೆ 11.30 ಮತ್ತು ಸಂಜೆ 7.30ಕ್ಕೆ ಪ್ರಸಾರವಾಗುವ ಕಾರ್ಯಕ್ರಮದಲ್ಲಿ 8ನೇ ಅಂತಾರ್‌ರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಯೋಗಾಚಾರ್ಯ ರಾಘವೇಂದ್ರ ಗುರೂಜಿ ಯೋಗ ದಿನಾಚರಣೆ ಕುರಿತಂತೆ ಮಾತನಾಡುವರು.

ಇದೇ ಕಾರ್ಯಕ್ರಮವು ನಾಡಿದ್ದು ದಿನಾಂಕ 21ರ ಮಂಗಳವಾರ ಬೆಳಿಗ್ಗೆ 11.30 ಮತ್ತು ಸಂಜೆ 7.30ಕ್ಕೆ ಪ್ರಸಾರವಾಗಲಿದೆ.


## ಪ್ರಥಮ ವರ್ಷದ ಪುಣ್ಯಸ್ಮರಣೆ



**ತಿಪ್ಪಯ್ಯನವರು**
ನಿವೃತ್ತರು ಕೆ.ಪಿ.ಟಿ.ಸಿ.ಎಲ್.

ನೀವು ನಮ್ಮನ್ನಗಲಿ ಇಂದಿಗೆ
ಒಂದು ವರ್ಷವಾಯಿತು.
ನೀವು ಹಾಕಿಕೊಟ್ಟ ಮಾರ್ಗದಲ್ಲಿ
ಮುನ್ನಡೆಯುತ್ತಾ...
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಧರ್ಮಪತ್ನಿ : ಶ್ರೀಮತಿ ಚನ್ನಬಸಮ್ಮನವರು
ಧನಂಜಯ, ಕೆ.ಪಿ.ಟಿ.ಸಿ.ಎಲ್, ಶ್ರೀಮತಿ ಸಾವಿತ್ರ ಮಲ್ಲಿಕಾರ್ಜುನ್
ಶ್ರೀಮತಿ ಲಲಿತ ಕುಮಾರಸ್ವಾಮಿ, ಶ್ರೀಮತಿ ಶಿಲ್ಪ ಹೇಮಂತ
ಶ್ರೀಮತಿ ದೀಪಾ ಸತೀಶ್, ಶ್ರೀಮತಿ ಛಾಯಾ ಹೊನ್ನೂರಪ್ಪ
ಮೊಮ್ಮಕ್ಕಳಾದ : ಕುಶಾಲ್‌ಕುಮಾರ್, ಲಿಖಿತಾ, ಭರತ್‌ಕುಮಾರ್, ನಿಖಿಲ್, ಐಶ್ವರ್ಯ, ಅಖಿಲೇಶ್, ಮೋಹಿತ್, ಸಾಮ್ರಾಟ್, ರಘುದೀಕ್ಷಿತ್, ವಿಷ್ಣು ರಾಹುಲ್
ಮಾಳಗಿ ಮನೆ ವಂಶಸ್ಥರು ಹಾಗೂ ಬಂಧು-ಮಿತ್ರರು.


## ದಿ ನ್ಯೂ ವೆನ್ಯೂ ಕಾರು ಬಿಡುಗಡೆ




ದಾವಣಗೆರೆ, ಜೂ. 18- ವಿಶಿಷ್ಟ ವಿನ್ಯಾಸ ನೂತನ ಆಕರ್ಷಣೆ ಹಾಗೂ ವಿಶೇಷ ಸೌಲಭ್ಯಗಳನ್ನು ಒಳಗೊಂಡಿರುವ ಕಾಂಪ್ಯಾಕ್ಟ್ ಸೆಡಾನ್ ಹುಂಡೈ ಆಲ್ ನ್ಯೂ ವೆನ್ಯೂ ಅನ್ನು ಕೆ.ಜೆ. ಹುಂಡೈ ಶೋರೂಂ ಗುರುವಾರ ಮಾರುಕಟ್ಟೆಗೆ ಪರಿಚಯಿಸಿದೆ.

ಯುವ ಸಮುದಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು ತಯಾರಿಸಿರುವ ಇದು ಸೆಡಾನ್ ಶ್ರೇಣಿಯಲ್ಲಿ ಹಲವಾರು ಹೊಸ ವೈಶಿಷ್ಟ್ಯಗಳನ್ನು ಒಳಗೊಂಡಿದೆ. 2022ರ ದಶಕದ ವಾಹನ ಉದ್ದಿಮೆ ಕ್ಷೇತ್ರದಲ್ಲಿ ವಿಶಿಷ್ಟ ಛಾಪು ಮೂಡಿಸಲಿರುವ ಮೊದಲ ಕಾರು ಇದಾಗಿದೆ ಎಂದು ಶೋರೂಂ ಮಾಲೀಕರಾದ ಕೆ.ಜೆ.ಅಫಕ್ ರಜ್ವಿ ತಿಳಿಸಿದರು.

ಸಮರ್ಪಕ ಇಂಧನ ಬಳಕೆ, ಉತ್ತಮ ಕಾರ್ಯನಿರ್ವಹಣೆಯ ಉತ್ಕೃಷ್ಟವಾದ ಬಿಎಸ್ 6 ಎಂಜಿನ್ ಒಳಗೊಂಡಿರುವ ಈ ವಾಹನವು ಪೆಟ್ರೋಲ್ ಮತ್ತು ಡೀಸೆಲ್‌ನ 2 ಶ್ರೇಣಿಯಲ್ಲಿ ಲಭ್ಯವಿದ್ದು, ಇದು ಪ್ರತಿ ಲೀಟರ್‌ಗೆ 18-20 ಮೈಲೇಜ್ ಕೊಡುತ್ತದೆ.

**ಹೊಸ ಆಕರ್ಷಣೆ:** ವೈರ್‌ಲೆಸ್ ಚಾರ್ಜಿಂಗ್, ಗೇರ್ ನಾಬ್‌ಗೆ ಚರ್ಮದ ಹೊದಿಕೆ, ಐಬ್ಲ್ಯು ಆಡಿಯೊ ರಿಮೋಟ್ ಫೋನ್ ಆ್ಯಪ್, ಯುಎಸ್‌ಬಿ ಚಾರ್ಜರ್, ಸ್ಪೀಡೋ ಮೀಟರ್ ಹಾಗೂ ಸ್ಮಾರ್ಟ್‌ಫೋನ್ ಜತೆ ಸಂಪರ್ಕಿಬಹುದಾದ 20.25 ಸೆಂ.ಮೀ ಗಾತ್ರದ ಟಚ್ ಸ್ಕ್ರೀನ್ ಸೇರಿದಂತೆ ಇನ್ನು ಮುಂತಾದ ಹೊಸ ಸೌಲಭ್ಯಗಳನ್ನು ಒಳಗೊಂಡಿದೆ.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಆರ್.ಟಿ.ಓ. ಅಧಿಕಾರಿ ಶ್ರೀಧರ್ ಮಲ್ಲಾಡ್, ಕೆ.ಜೆ.ಹುಂಡೈ ಸಂಸ್ಥೆಯ ಅಧ್ಯಕ್ಷ ಕೆ.ಜಾವೀದ್ ಸಾಬ್, ವ್ಯವಸ್ಥಾಪಕ ನಿರ್ದೇಶಕ ಕೆ.ಜೆ.ಅಫಕ್ ರಜ್ವಿ, ಸಂಸ್ಥೆಯ ನಿರ್ದೇಶಕ ಕೆ.ಜೆ.ಅಬ್ರಾರ್, ಮುಖ್ಯ ವ್ಯವಸ್ಥಾಪಕ ಕಮಲ್ ಪಾಶಾ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.


## ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ಶೇರಾಪುರ ಗ್ರಾಮದಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳಿಗೆ ಆರಂಭಿಕ ಠೇವಣಿಯನ್ನು Online ಮುಖಾಂತರವೇ ಸ್ವೀಕರಿಸಲಾಗುತ್ತದೆ. ಮಧ್ಯವರ್ತಿಗಳು ಕರ್ನಾಟಕ ಗೃಹ ಮಂಡಳಿಗೆ ಪಾವತಿಸುವುದಾಗಿ ತಿಳಿಸಿ ಕೆಲವು ಅರ್ಜಿದಾರರಿಂದ ಹಣವನ್ನು ಸ್ವೀಕರಿಸುತ್ತಿರುವುದಾಗಿ ತಿಳಿದುಬಂದಿರುತ್ತದೆ. ಅರ್ಜಿದಾರರು ಯಾವುದೇ ಮಧ್ಯವರ್ತಿಗಳಿಗೆ ನಗದು ಹಣವನ್ನು ನೀಡದೇ ನಿಯಮಾನುಸಾರ Online (www.khb.karnataka.gov.in) ಮುಖಾಂತರವೇ ಪಾವತಿ ಮಾಡುವಂತೆ ಈ ಮೂಲಕ ಅರ್ಜಿದಾರರ ಗಮನಕ್ಕೆ ತರಲಾಗಿದೆ.

ಸಹಿ/-
ಸಹಾಯಕ ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ಗೃಹ ಮಂಡಳಿ
ಜಿಲ್ಲಾ ಯೋಜನಾ ಕಛೇರಿ, ದಾವಣಗೆರೆ.


## ಶ್ರೀಮತಿ ಎಂ.ಎಂ. ಜಯಂತಿಮಾಲ ನಿಧನ



ದಾವಣಗೆರೆ ಇಸ್ಲಾಂ ಪೇಟೆ ನಿವಾಸಿ ನಶ್ಯಪುಡಿ ವರ್ತಕರಾದ ದಿ.ಎಂ.ಬಿ. ಮಹಾವೀರ್ ಅವರ ಧರ್ಮಪತ್ನಿ ಹಾಗೂ ಮೋತಿಖಾನೆ ಎಂ.ಎಂ. ವರ್ಧಮಾನ್ ಪ್ರಸಾದ್ ರವರ ತಾಯಿ ಶ್ರೀಮತಿ ಎಂ.ಎಂ. ಜಯಂತಿಮಾಲ (72) ಅವರು ದಿನಾಂಕ 18.06.2022ರ ಶನಿವಾರ ಸಂಜೆ 5.30ಕ್ಕೆ ಜಿನೈಕ್ಯರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 19.06.2022ರ ಭಾನುವಾರ ಬೆಳಿಗ್ಗೆ 10.30ಕ್ಕೆ ನಗರದ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಲಿದೆ.

## ಸೈನ್ಸ್ ಅಕಾಡೆಮಿಯ ಹೆಚ್.ಡಿ. ಸುಪ್ರೀತಾಗೆ ಶೇ. 98.5 ಫಲಿತಾಂಶ

ದಾವಣಗೆರೆ, ಜೂ. 18 - ನಗರದ ಸೈನ್ಸ್ ಅಕಾಡೆಮಿ ಪದವಿ ಪೂರ್ವ ಕಾಲೇಜಿನ ಹೆಚ್.ಡಿ. ಸುಪ್ರೀತಾ 600 ಅಂಕಗಳಿಗೆ 591 ಅಂಕಗಳನ್ನು ಗಳಿಸಿ 98.5% ರಷ್ಟು ಫಲಿತಾಂಶ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಕು. ಪ್ರೀತಮ್ ದಿ. ವಾಕರ್ (587/600) 97.83 ಹಾಗೂ ಕು.ಸಹನಾ ಜೆ. (584/600) 97.33% ಕು.ತೇಜಸ್ವಿನಿ ಕೆ.ಜೆ (584 / 600) 97.33% ಫಲಿತಾಂಶ ಪಡೆದು ಕ್ರಮವಾಗಿ ಕಾಲೇಜಿಗೆ ದ್ವಿತೀಯ ಹಾಗೂ ತೃತೀಯ ಸ್ಥಾನಗಳನ್ನು ಹಂಚಿಕೊಂಡಿರುತ್ತಾರೆ. ಉಳಿದಂತೆ ಕು. ಧನುಷಾ ಕೆ. (583/600) 97.16% ಹಾಗೂ ಕು. ಅನುಷಾ ಬಿ. (582/600) 97% ಗಳಿಸಿರುತ್ತಾರೆ. ಒಟ್ಟು ಗಣಿತದಲ್ಲಿ 20 ವಿದ್ಯಾರ್ಥಿಗಳು, ರಸಾಯನ ಶಾಸ್ತ್ರದಲ್ಲಿ 5 ವಿದ್ಯಾರ್ಥಿಗಳು, ಜೀವಶಾಸ್ತ್ರದಲ್ಲಿ 2 ವಿದ್ಯಾರ್ಥಿಗಳೂ ಹಾಗೂ ಭೌತಶಾಸ್ತ್ರದಲ್ಲಿ 1 ವಿದ್ಯಾರ್ಥಿ 11-100/100 ಅಂಕಗಳನ್ನು ಗಳಿಸಿರುತ್ತರೆ. 47 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ಹಾಗೂ 151 ವಿದ್ಯಾರ್ಥಿಗಳೂ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.


Bapuji Educational Association (R)
BAPUJI SPSS PU COLLEGE
Beside Davangere University, Tolahunse, Davangere-577 007.
Dr. SHAMANUR SHIVASHANKARAPPA
Hon. Secretary BEA(R)
Shri S S GANESH
Chairman
DISTINCTION 37%
FIRST 49.3%
Congratulation
DAVANGERE DISTRICT 2nd TOPPER
State 11th Rank
Shri MANJUNATHA RANGARAJU
Dean
CHAITRA E-99 B-100 A-100 CS-100 588 98.00%
AKASH NAGANUR P-100 C-99 M-100 B-99 587 97.83%
AJJAIAH H R P-100 C-99 M-100 B-99 587 97.83%
SUMA R PATIL P-96 C-97 M-100 B-99 581 96.83%
AKSHATHA SALMANI E-93 B-100 A-99 CS-100 574 95.67%
GANGA D HAVALAD P-98 C-99 M-100 B-94 569 94.83%
DAYANAND C K P-100 C-96 M-100 Cs-96 565 94.17%
LAKSHMI NARAYANA B P-94 C-92 M-100 B-95 565 94.17%
R ROSHAN P-90 C-90 M-100 B-97 563 93.83%
SAHANA B HIREMATH P-98 C-85 M-97 B-84 558 93.00%
DANESHWARI M J P-96 C-95 M-100 B-88 557 92.83%
CHAYA PATEL B P-91 C-87 M-100 B-99 557 92.83%
MD. SIYAM P-96 C-89 M-97 B-94 557 92.83%
PAVITRA S PATIL P-97 C-83 M-100 B-98 554 92.33%
ROHAN J P-97 C-93 M-100 B-96 550 91.67%
MANJUNATHA L PUJAR P-91 C-88 M-100 B-97 549 91.50%
SRUSHTI S A P-85 C-90 M-100 B-92 547 91.17%
CHETHAN GOWDA C P-88 C-92 M-100 B-88 541 90.17%
DHEEMANTH N K P-90 C-97 M-99 B-95 540 90.00%
HIRISH GOUDA P-90 C-88 M-100 B-89 539 89.83%
SATHVIK G R P-89 C-83 M-95 B-87 538 89.67%
TRILOKYA S K P-86 C-93 M-91 B-89 532 88.67%
B R CHETHAN KUMAR P-70 C-82 M-94 Cs-99 528 88.00%
LALITH ADITHYA K P-89 C-89 M-100 Cs-92 526 87.67%
RAAMANATH K P-84 C-67 M-99 Cs-99 523 87.17%
AKHILESH P P-87 C-79 M-98 Cs-92 517 86.17%
KHUSHI D P P-88 C-69 M-96 B-80 509 84.83%
SANTHOSH S D P-76 C-77 M-96 B-81 508 84.67%
SINDHU T S P-63 C-90 M-100 B-81 508 84.67%
HEMANTH SAI VERMA P-73 C-82 M-88 B-85 505 84.17%
SANJANA V SHETTY P-81 C-72 M-96 B-81 503 83.83%
YASHASWINI S R P-63 C-88 M-100 B-72 501 83.50%
Wishes From
Staff & Students of BSPSS PU College
Shri RAJESH PRASAD Principal
Shri MANJUNATHA RANGARAJU Dean
Shri S S GANESH Chairmam


ಅದಿತಿ ಎಜುಕೇಷನಲ್ ಟ್ರಸ್ಟ್ (ರಿ) ADITI EDUCATIONAL TRUST (Regd.)
ಸೈನ್ಸ್ ಅಕಾಡೆಮಿ ಪಿ ಯು ಕಾಲೇಜು
SCIENCE ACADEMY PU COLLEGE
# 307 / 2B, PJ EXTENSION, NEAR DISTRICT STADIUM DAVANGERE – 02 Ph: 08192 - 257546, 9448178087
II PUC RESULT - 2022
Congratulations to All the Students
State 7th RANK
SUPRITHA H D 591 / 600 98.5%
State 11th RANK
PREETHAM V D 587 / 600 97.83%
584 97.33% SAHANA J
584 97.33% TEJASWINI K J
584 97.33% YASHODHA C A
583 97.16% DHANUSHA K
582 97% ANUSHA B
575 95.83% RAGHU V
572 95.33% DARSHANA D
571 95.16% NIKATH KOUSAR
570 95% SUHANA K Z
569 94.83% DARSHAN P N
567 94.5% PRAKRUTHI S
567 94.5% PRUTHVI K V
566 94.33% SNEHA C
565 94.16% KUSUMA M R
565 94.16% SAHANA M RAIKAR
564 94% VENKATESH T
561 93.5% L PRASHANTHAKUMARA
559 93.16% SINDHU M
558 93% CHANDAN S HADAGALI
558 93% SNEHA J ACHARYA
558 93% VIVEKANANDA K
557 92.83% ANUSHA G K
555 92.5% CHETHAN YADAV K H
555 92.5% RAGHAVENDRA G B
552 92% SRUJAN S
546 91% VIDYASHREE V
544 90.66% SUMA H
543 90.5% PRIYA D
543 90.5% VARUN B K
542 90.33% HARSHITHA M
538 89.66% CHINMAY G M
536 89.33% ROHAN M R
535 89.16% SOWNDARYA M S
528 88% LAKSHMI A M
527 87.83% KARTHIK H M
525 87.5% GOVINDA M N
524 87.33% RAKSHITHA G R
523 87.16% BHAVANA B
523 87.16% NIKHIL N REVANKAR
522 87% RUKSAR R
521 86.83% PRASANNA R GOWLI
521 86.83% PRATHIBHA B K
521 86.83% SHREYAS S KULKARNI
518 86.33% ROHAN R M
513 85.5% KIRANMAYI B M
College Aggregate Result 91 %
No. of Distinctions 47
No. of Students who Secured 90% & Above 32
No. of First Class 151
Subject Wise 100 out of 100
Physics 01
Chemistry 05
Mathematics 20
Biology 02
We Don't Have Any Branches in Davangere
ದಾವಣಗೆರೆ ನಗರದಲ್ಲಿ ನಮ್ಮ ಸಂಸ್ಥೆಯ ವತಿಯಿಂದ ನಡೆಸುವ ಬೇರೆ ಯಾವುದೇ ಶಾಖೆಗಳಿಲ್ಲ.
ಉತ್ತಮ ಫಲಿತಾಂಶ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳು
ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಸೈನ್ಸ್ ಅಕಾಡೆಮಿ ಪದವಿ ಪೂರ್ವ ಕಾಲೇಜು, ದಾವಣಗೆರೆ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜೂನ್ 19, 2022


## ನಾಡಿದ್ದು ಎಲ್ಲಾ ಶಾಲೆಗಳಲ್ಲಿ ಯೋಗ ದಿನಾಚರಣೆ

ಬೆಂಗಳೂರು ಜೂ. 18 - ಇದೇ ದಿನಾಂಕ 21ರಂದು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆ ಆದೇಶಿಸಿದೆ.

ಸ್ಥಳೀಯ ಚುನಾಯಿತ ಪ್ರತಿನಿಗಳು, ಅಧಿಕಾರಿಗಳು, ಎಸ್.ಡಿ.ಎಂ.ಸಿ ಸದಸ್ಯರು, ಶಿಕ್ಷಕರು ಹಾಗೂ ಸ್ಥಳೀಯ ಯೋಗ ಸಂಸ್ಥೆಗಳ ಸಹಕಾರದೊಂದಿಗೆ ರಾಜ್ಯದ ಎಲ್ಲ ಶಾಲೆಗಳಲ್ಲಿ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂದು ಸೂಚಿಸಲಾಗಿದೆ.

ಅಂತರರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ರಾಜ್ಯದ ಎಲ್ಲ ಶಾಲೆಗಳಲ್ಲಿ ಅಂದು ಅರ್ಧ ದಿನ ಶಾಲೆಯನ್ನು ನಡೆಸಲು ಸೂಚಿಸಲಾಗಿದೆ.

ಆ ದಿನದ ಮೊದಲ ಒಂದೂವರೆ ಗಂಟೆಯ ಅವಧಿಯಲ್ಲಿ ವಿದ್ಯಾರ್ಥಿಗಳ ವಯಸ್ಸಿಗೆ ಅನುಗುಣವಾದ ಯೋಗಾಸನಗಳ ಅಭ್ಯಾಸ ಹಾಗೂ ಪ್ರದರ್ಶನಗಳನ್ನು ಹಮ್ಮಿಕೊಳ್ಳಬೇಕೆಂದು ತಿಳಿಸಿದೆ. ಆ ದಿನದ ಅರ್ಧ ದಿನದ ಪಾಠಗಳನ್ನು ಸರಿದೂಗಿಸಲು ಇದೇ ದಿನಾಂಕ 25 ಶನಿವಾರ ದಂದು ಪೂರ್ಣ ದಿನದ ಶಾಲೆ ನಡೆಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

## ಹರಪನಹಳ್ಳಿ; ದ್ವಿತೀಯ ಪಿ.ಯು: ಸಂತೋಷ್‌ಗೆ 3ನೇ ರ‍್ಯಾಂಕ್

ಹರಪನಹಳ್ಳಿ, ಜೂ.18- ಪಟ್ಟಣದ ಎಸ್‌ಯುಜೆಎಂ ಕಾಲೇಜಿನ ವಿದ್ಯಾರ್ಥಿ ಎಚ್ .ಸಂತೋಷ್ ದ್ವಿತೀಯ ಪಿ.ಯು ಕಲಾ ವಿಭಾಗದಲ್ಲಿ 592 ಅಂಕ ಪಡೆಯುವುದರ ಮೂಲಕ ರಾಜ್ಯಕ್ಕೆ ಮೂರನೇ ರ‍್ಯಾಂಕ್ ಗಳಿಸಿದ್ದಾರೆ.

ಕನ್ನಡ-99, ಸಂಸ್ಕೃತ -99, ಕನ್ನಡ ಐಚ್ಛಿಕ -99, ಇತಿಹಾಸ -98, ಪೊಲಿಟಿಕಲ್ ಸೈನ್ಸ್ -97, ಶಿಕ್ಷಣ ಶಾಸ್ತ್ರ -100 ಹೀಗೆ ಒಟ್ಟು 592 ಅಂಕಗಳನ್ನು ಗಳಿಸಿದ್ದಾರೆ. ಮೂಲತಃ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಕೇಶವರಾಯನ ಬಂಡಿ ಗ್ರಾಮದ ಎಚ್.ಸಂತೋಷ್, ಸಣ್ಣ ಹನುಮಂತಪ್ಪ ಹಾಗೂ ನಾಗರತ್ನ ಎಂಬ ಬಡ ದಂಪತಿಯ ಪುತ್ರ.

ಬಸ್ ಪಾಸ್ ಮಾಡಿಸಿಕೊಂಡು 50 ಕಿ.ಮೀ. ದೂರದಿಂದ ಹರಪನಹಳ್ಳಿಯ ಕಾಲೇಜಿಗೆ ಆಗಮಿಸುತ್ತಿದ್ದ ಸಂತೋಷ್, ಪರೀಕ್ಷೆ ವೇಳೆ 20 ಕಿ.ಮೀ. ದೂರದ ಇಟ್ಟಿಗಿ ಗ್ರಾಮದ ಸಂಬಂಧಿಕರ ಮನೆಯಲ್ಲಿ ಇದ್ದು ಅಭ್ಯಾಸ ಮಾಡಿದ್ದರು. ಬೆಳಿಗ್ಗೆ 4.30 ರಿಂದ 5.30 ರವರೆಗೆ ಸಂಜೆ 6 ರಿಂದ 10 ಗಂಟೆ ವರೆಗೆ ಅಭ್ಯಾಸ ಮಾಡುತ್ತಿದ್ದೆ , ತಂದೆ, ತಾಯಿ ಹಾಗೂ ಉಪನ್ಯಾಸಕರ ಪ್ರೋತ್ಸಾಹ ದಿಂದ ಹೆಚ್ಚು ಅಂಕ ಪಡೆಯಲು ಅನುಕೂಲವಾಯಿತು ಎಂದು ಸಂತೋಷ ಹರ್ಷಿಸಿದ್ದಾರೆ. (7ನೇ ಪುಟಕ್ಕೆ)



# ಪಿ.ಯು.ಸಿ ಜಿಲ್ಲೆಗೆ ಶೇ.62.72ರ ಫಲಿತಾಂಶ

## ರಾಜ್ಯದಲ್ಲೇ 19ನೇ ಸ್ಥಾನ, ವಿಶ್ವಚೇತನ ವಿದ್ಯಾನಿಕೇತನದ ಎಂ.ಜಿ. ಕಾವ್ಯಗೆ ವಿಜ್ಞಾನದಲ್ಲಿ ಪ್ರಥಮ ಸ್ಥಾನ

## ವಾಣಿಜ್ಯ ವಿಭಾಗದಲ್ಲಿ ಜಿಯಾ ಜೈನ್, ಕಲಾ ವಿಭಾಗದಲ್ಲಿ ಆರ್. ಪ್ರಿಯಾಂಕ ಜಿಲ್ಲೆಗೆ ಪ್ರಥಮ


ಎಂ.ಜಿ. ಕಾವ್ಯ


ಜಿಯಾ ಎಂ. ಜೈನ್


ಎಲ್. ವಿನಾಯಕ್


ಎಂ. ಶ್ರೀಭಾರುಣಿ


ಎ.ಭುವನ


ಜಿ.ಡಿ. ರಕ್ಷಿತ

ದಾವಣಗೆರೆ, ಜೂ. 18 - ಪಿ.ಯು.ಸಿ. ಪರೀಕ್ಷೆಯಲ್ಲಿ ಜಿಲ್ಲೆಗೆ ಶೇ.62.72ರ ಫಲಿತಾಂಶ ದೊರೆತಿದ್ದು, ರಾಜ್ಯದಲ್ಲೇ 19ನೇ ಸ್ಥಾನ ಪಡೆದಿದೆ.

ಈ ಹಿಂದೆ 2020ರಲ್ಲಿ ಜಿಲ್ಲೆಯಲ್ಲಿ ಶೇ.64.09ರ ಫಲಿತಾಂಶ ದೊರೆತಿತ್ತು ಹಾಗೂ ಆಗಲೂ ಸಹ ಜಿಲ್ಲೆ 19ನೇ ಸ್ಥಾನದಲ್ಲಿತ್ತು. 2021ರಲ್ಲಿ ಕೊರೊನಾ ಕಾರಣದಿಂದಾಗಿ ಎಲ್ಲಾ ವಿದ್ಯಾರ್ಥಿಗಳನ್ನು ಉತ್ತೀರ್ಣ ಮಾಡಲಾಗಿತ್ತು.

ಒಟ್ಟಾರೆ 17,722 ವಿದ್ಯಾರ್ಥಿಗಳು ಪಿ.ಯು.ಸಿ. ಪರೀಕ್ಷೆಗೆ ಹಾಜರಾಗಿದ್ದು, ಇವರಲ್ಲಿ 11,115 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳ ಉತ್ತೀರ್ಣತೆಯ ಪ್ರಮಾಣ ಶೇ.52.25 ಹಾಗೂ ವಿದ್ಯಾರ್ಥಿನಿಯರ ಉತ್ತೀರ್ಣತೆ ಪ್ರಮಾಣ ಶೇ.64.5 ಆಗಿದೆ.

**ವಿಜ್ಞಾನ ವಿಭಾಗ :** ನಗರದ ವಿಶ್ವಚೇತನ ವಿದ್ಯಾನಿಕೇತನ ಕಾಲೇಜಿನ ಎಂ.ಜಿ. ಕಾವ್ಯ ಅವರು ವಿಜ್ಞಾನ ವಿಭಾಗದಲ್ಲಿ ಶೇ.99.16 (595) ಅಂಕ ಗಳಿಸುವುದರೊಂದಿಗೆ ಜಿಲ್ಲೆಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ.

ಇದೇ ಕಾಲೇಜಿನ ಎ.ಭುವನ ಹಾಗೂ ಎಂ. ಶ್ರೀಭಾರುಣಿ ಅವರು ಶೇ.98.83 (593) ಅಂಕಗಳನ್ನು ಪಡೆದು ಜಿಲ್ಲೆಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ.

ಸಿದ್ದಗಂಗಾ ವಿಜ್ಞಾನ ಕಾಲೇಜಿನ ಎಲ್. ವಿನಾಯಕ್ ಸಹ 593 ಅಂಕಗಳನ್ನು ಪಡೆದು ಜಿಲ್ಲೆಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ನಗರದ ಮಾಗನೂರು ಬಸಪ್ಪ ಕಾಲೇಜಿನ ಜಿ.ಡಿ. ರಕ್ಷಿತ ಅವರು ವಿಜ್ಞಾನ ವಿಭಾಗದಲ್ಲಿ ಶೇ. 98.66 (592) ಅಂಕ ಗಳಿಸಿ ಮೂರನೇ ಸ್ಥಾನದಲ್ಲಿದ್ದಾರೆ.

**ವಾಣಿಜ್ಯ ವಿಭಾಗ :** ಸರ್ ಎಂ.ವಿ. ವಾಣಿಜ್ಯ ಕಾಲೇಜಿನ ಜಿಯಾ ಎಂ. ಜೈನ್ (7ನೇ ಪುಟಕ್ಕೆ)

### ವಿಜ್ಞಾನವೇ ಮೊದಲು, ಕಲೆ ಕೊನೆ

ಉತ್ತೀರ್ಣತೆಯ ವಿಷಯದಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳೇ ಮೊದಲಿಗರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ 8,210 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 6,290 ಉತ್ತೀರ್ಣರಾಗಿದ್ದಾರೆ. ಉತ್ತೀರ್ಣತೆಯ ಪ್ರಮಾಣ ಶೇ.76.02 ಆಗಿದೆ. ವಾಣಿಜ್ಯ ವಿಭಾಗದಲ್ಲಿ 4,874 ವಿದ್ಯಾರ್ಥಿಗಳು ಹಾಜರಾಗಿದ್ದು, 2,682 ಉತ್ತೀರ್ಣರಾಗುವುದರೊಂದಿಗೆ ಶೇ.62.18ರ ಫಲಿತಾಂಶ ಪಡೆದಿದ್ದಾರೆ.

ಕಲಾ ವಿಭಾಗದಲ್ಲಿ 5,199 ವಿದ್ಯಾರ್ಥಿಗಳು ಹಾಜರಾಗಿದ್ದು, 2,192 ಉತ್ತೀರ್ಣರಾಗುವುದರೊಂದಿಗೆ ಶೇ.42.16ರ ಫಲಿತಾಂಶ ಪಡೆದಿದ್ದಾರೆ. ನಗರ ಪ್ರದೇಶದಲ್ಲಿ ಶೇ.63.77ರ ಫಲಿತಾಂಶ ದೊರೆತಿದೆ. ಗ್ರಾಮೀಣ ಭಾಗದಲ್ಲಿ ಶೇ.59.23ರ ಫಲಿತಾಂಶ ಸಿಕ್ಕಿದೆ.

**ಸಾಮಾನ್ಯರು ಮುಂದೆ :** ಸಾಮಾನ್ಯ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಫಲಿತಾಂಶ ದೊರೆತಿದೆ. ಈ ವರ್ಗದ ಶೇ.74.48ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

3ಎ ವರ್ಗದ ಶೇ.74.75, 3ಬಿ ವರ್ಗದ ಶೇ.69.59, 2ಎ ವರ್ಗದ ಶೇ.62.73, ಎಸ್.ಟಿ. ವರ್ಗದ ಶೇ.50.09, 2.ಬಿ. ವರ್ಗದ ಶೇ.46.93 ಹಾಗೂ ಎಸ್.ಸಿ. ವರ್ಗದ ಶೇ.45.21ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

### ಟಾಪರ್‌ಗಳಿಗೆ ವೈದ್ಯಕೀಯ ಆಕರ್ಷಣೆ

ದಾವಣಗೆರೆ, ಜೂ. 18 - ವಿಜ್ಞಾನ ವಿಭಾಗದಲ್ಲಿ ಜಿಲ್ಲೆಯಲ್ಲೇ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಲ್ಲಿ ವೈದ್ಯರಾಗುವ ಅಪೇಕ್ಷೆ ಕಂಡು ಬಂದಿದೆ.

ವಿಶ್ವಚೇತನ ವಿದ್ಯಾನಿಕೇತನ ಕಾಲೇಜಿನ ಎಂ.ಜಿ. ಕಾವ್ಯ, ಎ. ಭುವನ, ಎಂ. ಶ್ರೀಭಾರುಣಿ, ಮಾಗನೂರು ಬಸಪ್ಪ ಕಾಲೇಜಿನ ಜಿ.ಡಿ. ರಕ್ಷಿತ ಅವರೆಲ್ಲರೂ ವೈದ್ಯರಾಗುವ ಕನಸು ಹೊಂದಿದ್ದಾರೆ.

ಸಿದ್ದಗಂಗಾ ವಿಜ್ಞಾನ ಕಾಲೇಜಿನ ಎಲ್. ವಿನಾಯಕ್ ಅವರು ತುಸು ಭಿನ್ನ ಹಾದಿಯಲ್ಲಿದ್ದು, ಪಶು ವೈದ್ಯರಾಗುವ ಗುರಿ ಹೊಂದಿದ್ದಾರೆ. ಹೊಳಲ್ಕೆರೆ ತಾಲ್ಲೂಕು ಅಂದನೂರಿನವರಾದ ವಿನಾಯಕ್, ರೈತ ಕುಟುಂಬದವರು. ಎಸ್.ಎಸ್. ಎಲ್.ಸಿ.ಯವರೆಗೂ ಮುತ್ತುಗದೂರಿನ ತರಳಬಾಳು ಶಾಲೆಯಲ್ಲಿ ಓದಿರುವ ಇವರು, ಕಾಲೇಜು ಮೆಟ್ಟಿಲು ಹತ್ತುವವರೆಗೂ ದನ - ಕರುಗಳ ಒಡನಾಟ ಬಿಟ್ಟಿಲ್ಲ.

ಪಶು ವೈದ್ಯರಾಗುವ (7ನೇ ಪುಟಕ್ಕೆ)

## ರಾಜ್ಯಕ್ಕೆ ಶೇ.61.88ರ ಫಲಿತಾಂಶ

### ದಕ್ಷಿಣ ಕನ್ನಡಕ್ಕೆ ಮೊದಲ, ಚಿತ್ರದುರ್ಗಕ್ಕೆ ಕೊನೆ ಸ್ಥಾನ

ಬೆಂಗಳೂರು ಜೂ. 18 - ಕಳೆದ ಏಪ್ರಿಲ್-ಮೇ ಮಾಹೆಯಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.61.88ರಷ್ಟು ಫಲಿತಾಂಶ ದೊರೆತಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಈ ಬಾರಿ ಶೇ.61.88ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 2020ರಲ್ಲಿ ನಡೆದ ದ್ವಿತೀಯ ಪಿಯು ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳ ಪೈಕಿ ಶೇ. 61.80ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಕಳೆದ ಬಾರಿಗಿಂತ ಈ ಬಾರಿ ಶೇ.0.8ರಷ್ಟು ಹೆಚ್ಚು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ತಿಳಿಸಿದರು. 2021ರಲ್ಲಿ ಕೊರೊನಾ ಕಾರಣದಿಂದಾಗಿ ಎಲ್ಲಾ ವಿದ್ಯಾರ್ಥಿಗಳನ್ನು ಪಾಸ್ ಮಾಡಲಾಗಿತ್ತು.

ಹೊಸ ವಿದ್ಯಾರ್ಥಿಗಳು, ಪುನರಾವರ್ತಿತ ಹಾಗೂ ಖಾಸಗಿ ವಿದ್ಯಾರ್ಥಿಗಳು ಸೇರಿದಂತೆ ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 6,83,563 ವಿದ್ಯಾರ್ಥಿಗಳ ಪೈಕಿ 4,22,966 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಲಾ ವಿಭಾಗದಲ್ಲಿ ಶೇ. 48.71ರಷ್ಟು ವಿದ್ಯಾರ್ಥಿಗಳು, ವಾಣಿಜ್ಯ ಶೇ. 64.97ರಷ್ಟು ಹಾಗೂ ವಿಜ್ಞಾನ ವಿಭಾಗದಲ್ಲಿ ಶೇ.72.53ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ತಿಳಿಸಿದರು.

5,99,794 ಹೊಸ ವಿದ್ಯಾರ್ಥಿಗಳ ಪೈಕಿ 4,02,697 ( ಶೇ.67.14ರಷ್ಟು) ಮಂದಿ ತೇರ್ಗಡೆಯಾಗಿದ್ದಾರೆ. ಪುನರಾವರ್ತಿತ 61,838 ವಿದ್ಯಾರ್ಥಿಗಳ ಪೈಕಿ 14,403 ವಿದ್ಯಾರ್ಥಿಗಳು (ಶೇ.23.29) ಹಾಗೂ 21,931 ಖಾಸಗಿ ಅಭ್ಯರ್ಥಿಗಳ ಪೈಕಿ 5,866 ಮಂದಿ(ಶೇ.26.75) ಉತ್ತೀರ್ಣರಾಗಿದ್ದಾರೆ.

ಪರೀಕ್ಷೆಗೆ ಒಟ್ಟು 6,83,563 ವಿದ್ಯಾರ್ಥಿಗಳು ಹಾಜರಾಗಿದ್ದರು. ಇದರಲ್ಲಿ 4,22,966 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 3,46,577 ಬಾಲಕರಲ್ಲಿ 1,91,380 (ಶೇ.55.22) ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ ಹಾಗೂ 3,37, 006 ಬಾಲಕಿಯರಲ್ಲಿ 2,31,586 (ಶೇ.68.72) ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ.

ನಗರ ಪ್ರದೇಶಗಳಿಗೆ ಹೋಲಿಸಿದರೆ ಎಂದಿನಂತೆ ಈ ಬಾರಿಯು ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಮೇಲುಗೈ (7ನೇ ಪುಟಕ್ಕೆ)

# ರೈತರಿಗೆ ಹಕ್ಕು ಪತ್ರ ಕೊಡಿಸಿಯೇ ಸಿದ್ಧ

## 'ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ' ಕಾರ್ಯಕ್ರಮದಲ್ಲಿ ಶಾಸಕ ಮಾಡಾಳ್



ದಾವಣಗೆರೆ, ಜೂ.18- ಅರಣ್ಯ ಇಲಾಖೆ ಒಡೆತನದ ಜಮೀನುಗಳಲ್ಲಿ ಸಾಗುವಳಿ ಮಾಡಿಕೊಂಡಿರುವ ಯಾವುದೇ ರೈತರು ಸಾಗುವಳಿ ಪತ್ರ ಇಲ್ಲ ಎಂದು ಧೈರ್ಯಗುಂದದಿರಿ, ಈಗಾಗಲೇ ನೀವು ಉಳುಮೆ ಮಾಡಿಕೊಂಡಿರುವ ಜಮೀನಿಗೆ ಹಕ್ಕು ಪತ್ರ ಕೊಡಿಸುತ್ತೇನೆ ಎಂದು ಚನ್ನಗಿರಿ ಶಾಸಕರು ಹಾಗೂ ಕೆಎಸ್‌ಡಿಎಲ್ ಅಧ್ಯಕ್ಷ ಮಾಡಾಳ್ ವಿರೂಪಾಕ್ಷಪ್ಪ ಹೇಳಿದರು.

ಚನ್ನಗಿರಿ ತಾಲ್ಲೂಕು ಮಾವಿನಕಟ್ಟೆ ಗ್ರಾಮದಲ್ಲಿ ಏರ್ಪಡಿಸಿದ್ದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಹಿಂದೆ ಕೇಂದ್ರ ಸರ್ಕಾರ ಅರಣ್ಯ ಪ್ರದೇಶಗಳಲ್ಲಿ ಮೂರು ತಲೆಮಾರುಗಳಿಂದ ಉಳುಮೆ ಮಾಡಿಕೊಂಡಿರುವ ಜಮೀನುಗಳ ಹಕ್ಕನ್ನು ಉಳುಮೆ ಮಾಡಿಕೊಂಡಿರುವವರಿಗೆ ನೀಡುತ್ತಿತ್ತು, ಈಗ ಆ ಕಾಯ್ದೆಗೆ ತಿದ್ದುಪಡಿ ಮಾಡಿ ಒಂದು ತಲೆಮಾರಿಗೆ ಸೀಮಿತಗೊಳಿಸಿ ಹಕ್ಕುಪತ್ರ ನೀಡುವ ಚಿಂತನೆಯಲ್ಲಿದ್ದು ಕಾಯ್ದೆ ಜಾರಿಯಾದರೆ ಎಲ್ಲರಿಗೂ ಅನುಕೂಲವಾಗಲಿದೆ ಎಂದರು.

ಪಿ.ಎಂ. ಕಿಸಾನ್ ಯೋಜನೆಯಲ್ಲಿ ದಾವಣಗೆರೆ ಜಿಲ್ಲೆಗೆ 397 ಕೋಟಿ ಹಣ ಬಂದಿದೆ. ಚನ್ನಗಿರಿ ತಾಲ್ಲೂಕಿನ 39 ಸಾವಿರ ರೈತರಿಗೆ 101 ಕೋಟಿ 67 ಲಕ್ಷ ರೈತರ ಖಾತೆಗೆ ಜಮೆಯಾಗುವುದರೊಂದಿಗೆ ಚನ್ನಗಿರಿ ತಾಲ್ಲೂಕಿಗೆ ಅಗ್ರಪಾಲು ದೊರೆತಿದೆ. ಅದರೊಂದಿಗೆ ಮಾವಿನಕಟ್ಟೆ ಗ್ರಾಮ ಪಂಚಾಯಿತಿಗೆ 8.87 ಕೋಟಿ ವೆಚ್ಚದ ವಿವಿಧ ಅಭಿವದ್ದಿ ಕಾಮಗಾರಿಗಳಾಗಿವೆ. ಮನೆ ಮನೆಗೆ ಗಂಗೆ ಯೋಜನೆಯಡಿ ಪ್ರತಿ ಮನೆಗೂ ನಲ್ಲಿ ಸಂಪರ್ಕ ಒದಗಿಸಿದ್ದು ಕುಡಿಯುವ ನೀರಿನ ಬವಣೆ ತಪ್ಪಿದೆ, ಹಿಂದಿನ ವರ್ಷಗಳಲ್ಲಿ ತಾಲ್ಲೂಕಿನಾದ್ಯಂತ ನೂರಾರು ಕೊಳವೆ ಬಾವಿಗಳನ್ನು ತೋಡಿಸಲಾಗುತಿತ್ತು, ಈ ಬಾರಿ ಹತ್ತರಿಂದ ಹದಿನೈದು ಬೋರ್‌ಗಳಷ್ಟನ್ನೇ ಕೊರೆಯಿಸಲಾಗಿದೆ ಎಂದರು.

ಮಹಿಳೆಯರು ಸಬಲರಾಗಬೇಕೆಂಬ ಉದ್ದೇಶದಿಂದ ಸರ್ಕಾರ ಸ್ತ್ರೀ ಶಕ್ತಿ ಸಂಘಗಳಿಗೆ ಅನುದಾನ ನೀಡುತಿದ್ದು, ತಾಲೋಕಿನ 40 ಸ್ತ್ರೀ ಶಕ್ತಿ ಸಂಘಗಳಿಗೆ ತಲಾ 1.25 (7ನೇ ಪುಟಕ್ಕೆ)

## ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಧ್ವನಿಯಾಗಬೇಕು

### ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಬಿ.ಪಿ.ಹರೀಶ್

ಮಲೇಬೆನ್ನೂರು, ಜೂ.18- ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಧ್ವನಿಯಾಗಿ ಕೆಲಸ ಮಾಡಬೇಕು. ಜನರನ್ನು ವಿನಾಕಾರಣ ಕಚೇರಿಗಳಿಗೆ ಅಲೆದಾಡಿಸಬೇಡಿ ಎಂದು ಮಾಜಿ ಶಾಸಕ ಬಿ.ಪಿ.ಹರೀಶ್ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಅವರು ಶನಿವಾರ ಎರೇಬೂದಿಹಾಳ್ ಗ್ರಾಮದಲ್ಲಿ ಹಮ್ಮಿಕೊಂಡಿದ್ದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' (7ನೇ ಪುಟಕ್ಕೆ)

## ಲಂಕಾ ಸೈನ್ಯಕ್ಕೆ ಬೇಸಾಯದ ಹೊಣೆ

ಕೊಲಂಬೊ, ಜೂ. 18 – ಆಹಾರ ಉತ್ಪಾದನೆ ಹೆಚ್ಚಿಸುವ ಸಲುವಾಗಿ 1,500 ಎಕರೆ ಜಮೀನಿನಲ್ಲಿ ಬೆಳೆ ಬೆಳೆಯುವ ಹೊಣೆಯನ್ನು ಶ್ರೀಲಂಕಾ ಸೈನ್ಯಕ್ಕೆ ವಹಿಸಲಾಗಿದೆ. ಸೈನ್ಯವು ಹಸಿರು ಕೃಷಿ ಸಂಚಾಲನಾ ಸಮಿತಿಯನ್ನು ರಚಿಸಿದೆ. ಈ ಮೂಲಕ ಆಹಾರ ಬಿಕ್ಕಟ್ಟು ಎದುರಿಸುವ ಕ್ರಮಕ್ಕೆ ಮುಂದಾಗಲಾಗಿದೆ. ಶ್ರೀಲಂಕ ತೀವ್ರ ಸ್ವರೂಪದ ಆಹಾರ ಬಿಕ್ಕಟ್ಟು ಎದುರಿಸುತ್ತಿದೆ.




# ಬೃಹತ್ ಯೋಗ ಜಾಥಾಕ್ಕೆ ಚಾಲನೆ

ದಾವಣಗೆರೆ, ಜೂ.18- ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಇಲ್ಲಿನ ಹೈಸ್ಕೂಲ್ ಮೈದಾನದಲ್ಲಿ ಶನಿವಾರ ನಡೆದ ಬೃಹತ್ ಯೋಗ ಜಾಥಾಕ್ಕೆ ಹರಿಹರ ಪಂಚಮ ಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ ಚಾಲನೆ ನೀಡಿದರು.

ಯೋಗ ಜಾಥಾಕ್ಕೂ ಮುನ್ನ ವಿವಿಧ ಶಾಲೆಗಳಿಂದ ಬಂದಿದ್ದ 1000ಕ್ಕೂ ಹೆಚ್ಚು ಮಕ್ಕಳಿಗೆ, ಅಧಿಕಾರಿಗಳಿಗೆ ಯೋಗಾಭ್ಯಾಸ ಹೇಳಿಕೊಟ್ಟರು. ಮುಂಜಾನೆಯೇ ಬಂದಿದ್ದ ಮಕ್ಕಳು ಯೋಗವನ್ನು ಕಲಿತು ಖುಷಿಪಟ್ಟರು. ಸದಾ ಒತ್ತಡದಲ್ಲಿ ಇರುವ ಅಧಿಕಾರಿಗಳು ಯೋಗ ಮಾಡಿ ಮನಸ್ಸು ಹಗುರ ಮಾಡಿಕೊಂಡರು.

ಶ್ರೀ ವಚನಾನಂದ ಸ್ವಾಮೀಜಿ ಮಾತನಾಡಿ, ಮಾನವೀಯತೆ, ಕರುಣೆ, ಅಹಿಂಸೆಯನ್ನು ಪ್ರತಿಷ್ಠಾಪನೆ ಮಾಡುವುದು ಯೋಗದ ಉದ್ದೇಶ. ಪತಂಜಲಿಯವರು ಇದನ್ನೇ ಹೇಳಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಜಿಲ್ಲಾ ಯೋಗ ಒಕ್ಕೂಟದ ಕಾರ್ಯದರ್ಶಿ ವಾಸುದೇವ ರಾಯ್ಕರ್ ಮಾತನಾಡಿ, ಮಕ್ಕಳು ಪ್ರತಿನಿತ್ಯ ಯೋಗ ಮಾಡಬೇಕು. ಜಿಲ್ಲೆಯಲ್ಲಿ 200ಕ್ಕೂ ಹೆಚ್ಚು ಯೋಗ ಶಿಕ್ಷಕರು ಇದ್ದು, ಅವರು ಯೋಗ ಕಲಿಸಿಕೊಡಲಿದ್ದಾರೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್, ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ಬಿ.ಸಿ. ಉಮಾಪತಿ, ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ಲೋಕೇಶ್, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಆನಂದ್, ಡಿಡಿಪಿಐ ತಿಪ್ಪೇಶಪ್ಪ, ಆಯುಷ್ ಇಲಾಖೆಯ ಶಂಕರೇಗೌಡ, ಬಿಇಒಗಳಾದ ನಿರಂಜನಮೂರ್ತಿ, ಅಂಬಣ್ಣ ಹಾಜರಿದ್ದರು.

# ಖಾತ್ರಿಯಲ್ಲಿ 1.72 ಕೋಟಿ ಹಗರಣ: ತನಿಖೆಗೆ ಸೂಚನೆ

### ಜಗಳೂರು ಶಾಸಕ ಎಸ್.ವಿ. ರಾಮಚಂದ್ರ

ಜಗಳೂರು, ಜೂ. 18- ತಾಲ್ಲೂಕಿನ ಕ್ಯಾಸೇನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 1.72 ಕೋಟಿ ರೂ. ಉದ್ಯೋಗ ಖಾತ್ರಿ ಯೋಜನೆಯಡಿ ಹಗರಣದ ನಡೆದಿದೆ ಎಂಬ ದೂರಿನನ್ವಯ ಸೂಕ್ತ ತನಿಖೆ ನಡೆಸಲು ಜಿ.ಪಂ. ಸಿಇಓ ಅವರಿಗೆ ಸೂಚನೆ ನೀಡುತ್ತೇನೆ ಎಂದು ಶಾಸಕ ಎಸ್. ವಿ..ರಾಮಚಂದ್ರ ತಿಳಿಸಿದರು.

ತಾಲ್ಲೂಕಿನ ಕ್ಯಾಸನೇಹಳ್ಳಿ ಗ್ರಾಮದಲ್ಲಿ ಇಂದು ಕಂದಾಯ ಇಲಾಖೆ, ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' ಗ್ರಾಮ ವಾಸ್ತವ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ



ಖಾತ್ರಿ ಯೋಜನೆಯ ಕಾಮಗಾರಿಯಲ್ಲಿ 1 ಕೋಟಿ 71 ಲಕ್ಷ ರೂ. ಹಗರಣವಾಗಿದ್ದು, ಸ್ಥಳ ಪರಿಶೀಲನೆ ನಡೆಸಬೇಕು. ಅಲ್ಲದೆ ಕೂಲಿ ಹಣ ಪಾವತಿಯಾಗದೆ ವಿಳಂಬವಾಗಿದೆ ಎಂದು ಸರ್ಕಾರೇತರ ಸಂಸ್ಥೆಯ ಸ್ವಯಂ ಸೇವಕಿ ರೇಣುಕಾ ಆರೋಪಿಸಿದರು.

ತಕ್ಷಣವೇ ಶಾಸಕ ಎಸ್ ವಿ. ರಾಮಚಂದ್ರ ಅವರು ಮಧ್ಯ ಪ್ರವೇಶಿಸಿ ಕೂಡಲೇ ಪಿಡಿಓ ಅವರ ವರ್ಗಾವಣೆಗೆ ಆದೇಶ ನೀಡಿದ ಶಾಸಕರು, ಸ್ಥಳ ಪರಿಶೀಲನೆ ನಡೆಸಿ ತನಿಖೆಗೆ ಜಿ.ಪಂ. ಸಿಇಓ ಗೆ ಸೂಚಿಸಲಾಗಿದ್ದು. ಅಧಿಕಾರಿಗಳಿಂದ ವರದಿ ಪಡೆದು ಹಗರಣ ಸಾಬೀತಾದಲ್ಲಿ ಪಿಡಿಓಗೆ ತಕ್ಕ ಶಾಸ್ತಿ ಮಾಡಲಾಗುವುದು ಎಂದು ಆರೋಪಕ್ಕೆ ಉತ್ತರಿಸಿದರು.

ಗ್ರಾಮಗಳ ಕುಂದುಕೊರತೆ ಆಲಿಸಿ ಸರ್ಕಾರಿ ಸೌಲಭ್ಯಗಳನ್ನು ಮನೆ ಬಾಗಿಲಿಗೆ ತಲುಪಿಸಲು ಜನಪರ ಕಾಳಜಿಯಿಂದ ಬಿಜೆಪಿ ಆಡಳಿತ ಸರ್ಕಾರ ರಾಜ್ಯದಲ್ಲಿ ಗ್ರಾಮ ವಾಸ್ತವ್ಯ ಜಾರಿಗೊಳಿಸಿದೆ. ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕ ರಾಮಚಂದ್ರ ತಿಳಿಸಿದರು.

ಸಿರಿಗೆರೆ ಶ್ರೀಗಳ ಆಶೀರ್ವಾದದಿಂದ ತುಪ್ಪದಹಳ್ಳಿ ಕೆರೆ ಕೋಡಿ ಬಿದ್ದು ರೈತರ ಮುಖದಲ್ಲಿ ಹರ್ಷ (7ನೇ ಪುಟಕ್ಕೆ)


## ಮುರುಘಾ ಮಠಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಭೇಟಿ





